ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಅಂಬೇಡ್ಕರ್ ಭವನಗಳನ್ನು ಸ್ಥಾಪಿಸುವಂತೆ ಈ ಕೆಳಕಂಡ ಜಿಲ್ಲೆಗಳಿಂದ ಪ್ರಸ್ತಾವನೆಗಳು ಬಂದಿದೆ. ಅನುಬಂಧ–'ಆ'

ಕ್ರ.ಸಂ.	ಜಿಲ್ಲೆಯ ಹೆಸರು	ಪ್ರಸ್ತಾವನೆಗಳ ಸಂಖ್ಯೆ
1.	ಬೆಂಗಳೂರು (ಗ್ರಾ)	6
2.	ಚಿತ್ರದುರ್ಗ	1
3.	ದಾವಣಗೆರೆ	4
4.	ತುಮಕೂರು	8
5.	ಚಾಮರಾಜನಗರ	2
6.	ಮಂಡ್ಯ	2
7.	ಹಾಸನ	1
8.	ಚಿಕ್ಕಮಗಳೂರು	10
9.	ಉಡುಪಿ	1
10.	ಬೆಳಗಾಂ	1
11.	ಗದಗ	1
12.	ಬೀದರ್	7
	ಒಟ್ಟು	**44**

555 (898) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟು ಇಲಿ ಜ್ವರ ಮತ್ತು ಚಿಕುಂಗುನ್ಯ ರೋಗ ಪ್ರಕರಣಗಳು ಪತ್ತೆಯಾಗಿವೆ? ಇದರಿಂದಾಗಿ ಪ್ರಾಣ ಕಳೆದುಕೊಂಡವರ ಸಂಖ್ಯೆ ಎಷ್ಟು; ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು;

ಆ) ಈ ರೋಗಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಹಾಗೂ ಈ ರೋಗಗಳಿಂದ ಪ್ರಾಣ ಕಳೆದುಕೊಂಡವರಿಗೆ ಸರ್ಕಾರ ಇದುವರೆವಿಗೆ ವಿತರಣೆ ಮಾಡಿರುವ ಪರಿಹಾರದ ಮೊತ್ತವೆಷ್ಟು;

ಇ) ಈ ರೋಗಗಳನ್ನು ತಡೆಗಟ್ಟುವಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಎಷ್ಟು ಬಾರಿ ರೋಗಪೀಡಿತ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಒಟ್ಟು 41777 ಚಿಕುಂಗುನ್ಯ ಹಾಗೂ 58 ಇಲಿಜ್ವರ ಸಂಶಯಾಸ್ಪದ ಪ್ರಕರಣಗಳು ಪತ್ತೆಯಾಗಿವೆ. ಚಿಕುಂಗುನ್ಯ ಮಾರಣಾಂತಿಕವಲ್ಲ. ಇದುವರೆಗೂ ಯಾವುದೇ ಸಾವು ಸಂಭವಿಸಿರುವುದಿಲ್ಲ. ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

ಪ್ರಕರಣಗಳು	ಔರಾದ	ಬೀದರ್	ಭಾಲ್ಕಿ	ಬಸವ ಕಲ್ಯಾಣ	ಹುಮ್ನಾಬಾದ್
ಚಿಕುಂಗುನ್ಯ	12814	5305	9637	8742	5279
ಇಲಿಜ್ವರ ಶಂಕಿತ	31	–	12	2	13
ಇಲಿ ಜ್ವರ ಖಚಿತ	14	–	10	1	4

ಆ)

1. ಜ್ವರಪೀಡಿತರ ಸಮೀಕ್ಷೆ. ಈ ರೋಗದ ಲಕ್ಷಣವಿರುವ ರೋಗಿಗಳಿಗೆ ಸೂಕ್ತ ಚಿಕಿತ್ಸೆ, ಜ್ವರಪೀಡಿತರು ಹೆಚ್ಚಾದ ಪ್ರದೇಶಗಳಲ್ಲಿ ವಿಶೇಷ ತಾತ್ಕಲಿಕ ಚಿಕಿತ್ಸಾಲಯಗಳ ಸ್ಥಾಪನೆ, ವೈದ್ಯರ ನಿಯೋಜನೆ, ಆಂಬ್ಯೂಲೆನ್ಸ್ ವಾಹನಗಳ ಒದಗಿಸುವಿಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ.
2. ಸಾಮಾನ್ಯ ಔಷಧಿಗಳಾದ ಪ್ಯಾರಸಿಟಮಾಲ್, ಡೈಕ್ಲೋಪಿನಿಕ್ ಸೋಡಿಯಂ, ಐ.ವಿ. ಫ್ಲ್ಯುಯಿಡ್ಸ್, ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಾಗಿದೆ.
3. ರೋಗವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ ಧೂಮಿಕರಣ ಕೈಗೊಂಡಿದ್ದು, 52 ಧೂಮಿಕರಣ ಯಂತ್ರಗಳು ಮತ್ತು ಕೀಟನಾಶಕಗಳನ್ನು ಎಲ್ಲಾ ಸಮಸ್ಯಾತ್ಮಕ ಪ್ರದೇಶಗಳಿಗೆ ಒದಗಿಸಲಾಗಿದೆ.
4. ಈ ಜಿಲ್ಲೆಯಲ್ಲಿ ಹೆಚ್ಚಿನ ಸಾಮಗ್ರಿ ಸರಬರಾಜಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಹೆಚ್ಚಿನ 15ಲಕ್ಷ ರೂಪಾಯಿಗಳ ಅನುದಾನವನ್ನು 2006–07ನೇ ಸಾಲಿನಲ್ಲಿ ಬಿಡುಗಡೆ ಮಾಡಿ, ರೋಗ ಪೀಡಿತ ಪ್ರದೇಶಗಳಲ್ಲಿ ಸಮರೋಪಾದಿಯಲ್ಲಿ ಅವಶ್ಯಕವಿರುವ ಔಷಧಿ, ಕೀಟನಾಶಕ ಯಂತ್ರೋಪಕರಣ ಗಳನ್ನು ಖರೀದಿಸಿ, ಒದಗಿಸಲು ಸೂಚಿಸಲಾಗಿದೆ.
5. ಜನರಲ್ಲಿ ಆತಂಕ ಹೊಡೆದೋಡಿಸಿ, ಈ ರೋಗ ತಡೆಗಟ್ಟುವ ಬಗ್ಗೆ ಸಂಪೂರ್ಣ ಅರಿವು ಮೂಡಿಸಲು ಹಾಗೂ ಸೊಳ್ಳೆ ಉತ್ಪತ್ತಿ ತಾಣ ನಿರ್ಮೂಲನೆ ಸ್ವಯಂರಕ್ಷಣಾ ವಿಧಾನಗಳು, ಮನೆಯ ಒಳ–ಹೊರ ಸಣ್ಣಸಣ್ಣ ನೀರಿನ ಶೇಖರಣೆಗಳ ಮುಚ್ಚುವಿಕೆ/ ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಆರೋಗ್ಯ ಶಿಕ್ಷಣವನ್ನು ನೀಡಿ ವಿವಿಧ ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗುತ್ತಿದೆ.

6. ಸರ್ಕಾರವು ಈ ರೋಗ ನಿಯಂತ್ರಿಸಲು ಎಲ್ಲಾ ರೀತಿಯಲ್ಲಿಯೂ ಕ್ರಮ ಕೈಗೊಂಡಿದ್ದು, ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಸಂಪೂರ್ಣ ನಿಯಂತ್ರಣಕ್ಕೆ ಬಂದಿರುವ ವರದಿಗಳು ಬರುತ್ತಿವೆ.
7. ಚಿಕುಂಗುನ್ಯ ರೋಗ ಮಾರಣಾಂತಿಕವಲ್ಲ. ಇದುವರೆಗೂ ಯಾವುದೇ ಸಾವು ಸಂಭವಿಸಿಲ್ಲವಾದ್ದರಿಂದ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇಲಿಜ್ವರ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳು

1. ಇಲಿಗಳು ಮನೆಗಳಲ್ಲಿ ಹಾಗೂ ಮನೆಯ ಪಕಾರಗಳಲ್ಲಿ ಬರದಂತೆ ತಡೆಯಲು ಸ್ವಚ್ಛತೆ ಮತ್ತು ಪರಿಸರ ನೈರ್ಮಲ್ಯವನ್ನು ಕಾಪಾಡುವುದು ಅಗತ್ಯವಾಗಿದ್ದು, ಗ್ರಾಮಪಂಚಾಯತಿಗಳ ಸಹಕಾರದಿಂದ ಚರಂಡಿಗಳನ್ನು ಸ್ವಚ್ಛಗೊಳಿಸಿ, ಬ್ಲೀಚಿಂಗ್ ಪೌಡರನ್ನು ಸಿಂಪಡಿಸಲಾಗಿದ್ದು, ತಿಪ್ಪೆಗುಂಡಿಗಳನ್ನು ವಾಸಸ್ಥಾನದಿಂದ ಬೇರೆಡೆಗೆ ಸ್ಥಳಾಂತರಿಸಲಾಗಿದೆ.
2. ಸಕ್ರಿಯ ಸಮೀಕ್ಷಾ ಕಾರ್ಯವನ್ನು ಬಲಪಡಿಸಿ, ಪ್ರತಿ ಮನೆಗೆ ಭೇಟಿ ನೀಡಿ, ಪೀಡಿತ ಜನರಿಗೆ ಚಿಕಿತ್ಸೆ ನೀಡಲಾಗಿದೆ.
3. 94 ರಕ್ತದ ಮಾದರಿಗಳನ್ನು ಎನ್.ಐ.ಸಿ.ಡಿ. ಬೆಂಗಳೂರು ಸಂಸ್ಥೆಗೆ ಪರೀಕ್ಷೆಗಾಗಿ ಕಳುಹಿಸಲಾಗಿದೆ.
4. ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ವೈದ್ಯರು ಮತ್ತು ಸಿಬ್ಬಂದಿವರ್ಗದವರನ್ನು ನಿಯೋಜಿಸಿ ವೈದ್ಯಕೀಯ ಸೇವೆಗಳನ್ನು ಒದಗಿಸಲಾಗಿದೆ.
5. ಅವಶ್ಯಕವಿರುವ ಟೆಟ್ರಾಸೈಕ್ಲಿನ್ ಡಾಕ್ಸಿಸೈಕ್ಲಿನ್ ಹಾಗೂ ಬೆಂಜಾಯಿಲ್ ಪೆನ್ಸಿಲಿನ್ ಔಷಧಿಗಳನ್ನು 'ರಾಜ್ಯಮಟ್ಟದ ಡ್ರಗ್ ಲಾಜಿಸ್ಟಿಕ್ ಸೊಸೈಟಿ' ಯಿಂದ ಜಿಲ್ಲೆಗೆ ಬಿಡುಗಡೆ ಮಾಡಿಸಿ ತುರ್ತು ಚಿಕಿತ್ಸೆಗೆ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿದೆ.
6. ಅಗತ್ಯವಿರುವ ರೂ. 1.50 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಅವಶ್ಯಕವಿರುವ ಔಷಧಿ ಮತ್ತು ಕೀಟನಾಶಕಗಳನ್ನು ಖರೀದಿಸಿ, ಒದಗಿಸಲು ಸೂಚಿಸಲಾಗಿದೆ.
7. ದಿ: 6-1-2006ರಂದು ಎನ್.ಐ.ಸಿ.ಡಿ. ಸಂಸ್ಥೆಯ ತಜ್ಞರ ತಂಡದಿಂದ ಪೀಡಿತ ಗ್ರಾಮಗಳಲ್ಲಿ ಅಧ್ಯಯನವನ್ನು ಮಾಡಿಸಿ ಜಿಲ್ಲೆಯ ವೈದ್ಯರು ಮತ್ತು ಕ್ಷೇತ್ರ ಸಿಬ್ಬಂದಿಗೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಿ ನಿಯಂತ್ರಣ ಕ್ರಮಗಳ ಮತ್ತು ಚಿಕಿತ್ಸೆಯ ಬಗ್ಗೆ ತರಬೇತಿ ನೀಡಲಾಗಿದೆ.

8. 291 ಕುಡಿಯುವ ನೀರಿನ ಮೂಲಗಳಿಂದ ನೀರನ್ನು ಬ್ಯಾಕ್ಟೀರಿಯಾಲಜಿ ಪರೀಕ್ಷೆಗೆ ಒಳಪಡಿಸಿ 21 ನೀರಿನ ಮೂಲಗಳನ್ನು ಕ್ಲೋರಿನೇಶನ್ ಮಾಡಲಾಗಿದೆ. ಪೀಡಿತ ಗ್ರಾಮಗಳಲ್ಲಿ ಎಲ್ಲ ಮನೆಗಳಿಗೆ ಹ್ಯಾಲೋಜನ್ ಮಾತ್ರೆಗಳನ್ನು ವಿತರಿಸಿ ಕುಡಿಯುವ ನೀರನ್ನು ಶುದ್ದೀಕರಿಸಲು ಸಲಹೆ ನೀಡಲಾಗಿದೆ.
9. ರೋಗ ಹರಡದಂತೆ, ಮುಂಜಾಗ್ರತ ಕ್ರಮಗಳ ಬಗ್ಗೆ ಜನರಿಗೆ ಆರೋಗ್ಯ ಶಿಕ್ಷಣ ನೀಡಲಾಗಿದೆ.
10. 26–3–2006ರಿಂದ ಖಾಸಗಿ ವೈದ್ಯರಿಗೆ ಮತ್ತು ಬೀದರಿನ ನಾಗರಿಕರಿಗೆ ವಿಶೇಷ ಉಪನ್ಯಾಸ ನೀಡಿ ಈ ರೋಗದ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಗಿದೆ.
11. 16–2–2006 ರಂದು ಮತ್ತು 17–3–2006ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮನ್ವಯ ಸಮಿತಿಯಲ್ಲಿ ಈ ಕಾಯಿಲೆಯ ನಿಯಂತ್ರಣದ ಬಗ್ಗೆ ಇತರ ಇಲಾಖೆಗಳ ಸಹಕಾರ ನೀಡುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ.
12. 13–3–2006ರಂದು ಡಾ: ಯು.ವಿ.ಎಸ್. ರಾಣಾ ಎನ್.ಐ.ಸಿ.ಡಿ. ನವದೆಹಲಿ ಇವರಿಂದ ಬೀದರ್ ಜಿಲ್ಲೆಯ ಪೀಡಿತ ಗ್ರಾಮಗಳಲ್ಲಿ ಅಧ್ಯಯನ ಮಾಡಿಸಲಾಗಿದೆ.
13. ಎಲ್ಲಾ ಹಳ್ಳಿಗಳಲ್ಲಿ ವಿಶೇಷ ತಂಡಗಳನ್ನು ರಚಿಸಿ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದಿಂದ ಈ ರೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗಿದೆ.
14. ಸಂಚಾರಿ ಚಿಕಿತ್ಸಾ ತಂಡಗಳನ್ನು ರಚಿಸಿ ಎಲ್ಲಾ ರೋಗಗ್ರಸ್ಥ ಹಳ್ಳಿಗಳಲ್ಲಿ ಚಿಕಿತ್ಸೆಯನ್ನು ನೀಡಲಾಗಿದೆ.
15. ಹೆಚ್ಚುವರಿ ವೈದ್ಯರನ್ನು ಮತ್ತು ಕ್ಷೇತ್ರ ಸಿಬ್ಬಂದಿಗಳನ್ನು ಇತರ ಸಂಸ್ಥೆಗಳಿಂದ ಪೀಡಿತ ಗ್ರಾಮಗಳಿಗೆ ನಿಯೋಜಿಸಿ ಸಂಪೂರ್ಣ ನಿಯಂತ್ರಣಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ.
16. ಇಲಿಜ್ವರದಿಂದ ಪ್ರಾಣಕಳೆದುಕೊಂಡ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಇ) ಇಲ್ಲ.

ಜಿಲ್ಲಾಮಟ್ಟದ ಅಧಿಕಾರಿಗಳ ಪರಿಶೀಲನಾ ವಿವರಗಳು ಹೀಗಿವೆ.

ಇಲಿಜ್ವರವನ್ನು ನಿಯಂತ್ರಿಸುವಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಪರಿಶೀಲನಾ ವಿವರಗಳು.

1. 6–1–2006ರಂದು ಎನ್.ಐ.ಸಿ.ಡಿ. ಸಂಸ್ಥೆಯ ತಜ್ಞರ ತಂಡದಿಂದ ಪೀಡಿತ ಗ್ರಾಮಗಳಲ್ಲಿ ಅಧ್ಯಯನವನ್ನು ಮಾಡಿಸಿ ಜಿಲ್ಲೆಯ ವೈದ್ಯರು ಮತ್ತು ಕ್ಷೇತ್ರ ಸಿಬ್ಬಂದಿಗೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಿ ನಿಯಂತ್ರಣ ಕ್ರಮಗಳ ಮತ್ತು ಚಿಕಿತ್ಸೆಯ ಬಗ್ಗೆ ತರಬೇತಿ ನೀಡಲಾಗಿದೆ.

2. 26–3–2006ರಿಂದ ಖಾಸಗಿ ವೈದ್ಯರಿಗೆ ಮತ್ತು ಬೀದರಿನ ನಾಗರಿಕರಿಗೆ ವಿಶೇಷ ಉಪನ್ಯಾಸ ನೀಡಿ ಈ ರೋಗದ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಗಿದೆ.
3. 16–7–2006ರಂದು ಮತ್ತು 17–3–2006ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮನ್ವಯ ಸಮಿತಿಯಲ್ಲಿ ಈ ಕಾಯಿಲೆಯ ನಿಯಂತ್ರಣದ ಬಗ್ಗೆ ಇತರ ಇಲಾಖೆಗಳ ಸಹಕಾರ ನೀಡುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ.
4. 13–3–2006ರಂದು ಡಾ. ಯು.ವಿ.ಎಸ್. ರಾಣಾ ಎನ್.ಐ.ಸಿ.ಡಿ. ನವದೆಹಲಿ ಇವರಿಂದ ಬೀದರ್ ಜಿಲ್ಲೆಯ ಪೀಡಿತ ಗ್ರಾಮಗಳಲ್ಲಿ ಅಧ್ಯಯನ ಮಾಡಿಸಲಾಗಿದೆ.
5. ಜಿಲ್ಲಾ ಸಮೀಕ್ಷಣಾಧಿಕಾರಿಗಳಿಂದ ಸಕ್ರಿಯ ಸಮೀಕ್ಷಾ ಕಾರ್ಯವನ್ನು ಬಲಪಡಿಸಿ ಪ್ರತಿ ಮನೆಗೆ ಭೇಟಿ ನೀಡಿ ಪೀಡಿತ ಜನರಿಗೆ ಚಿಕಿತ್ಸೆ ನೀಡಲು ವ್ಯವಸ್ಥೆಯನ್ನು ಮಾಡಲಾಗಿದೆ.
6. ಜಿಲ್ಲಾ ಸಮೀಕ್ಷಣಾಧಿಕಾರಿಗಳು ಖುದ್ದಾಗಿ 350 ರೋಗಪೀಡಿತ ಗ್ರಾಮಗಳಿಗೆ ಭೇಟಿ ನೀಡಿ ನಿಯಂತ್ರಣ ಕಾರ್ಯಕ್ರಮ ಹಾಗೂ ಚಿಕಿತ್ಸೆ ವ್ಯವಸ್ಥೆಯನ್ನು ಪರಿಶೀಲಿಸಿರುತ್ತಾರೆ.

ಚಿಕೂನ್ ಗುನ್ಯಾ ಜ್ವರವನ್ನು ನಿಯಂತ್ರಿಸುವಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಪರಿಶೀಲನಾ ವಿವರಗಳು:

1. ದಿನಾಂಕ: 8–11–05/ 19–12–05ರಂದು ಎನ್.ಐ.ವಿ. ಬೆಂಗಳೂರು ಹಾಗೂ ಪುಣೆ ತಜ್ಞರ ತಂಡಗಳು ಜಿಲ್ಲೆಗೆ ಭೇಟಿ ನೀಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿರುತ್ತಾರೆ.
2. ದಿ: 25–2–06ರಂದು ಜಿಲ್ಲಾ ವಾರ್ತಾಧಿಕಾರಿಗಳ ಮುಖಾಂತರ ಎಲ್ಲಾ ಸುದ್ದಿಮಾಧ್ಯಮಗಳ ಮೂಲಕ ಚಿಕುಂಗುನ್ಯ ಲಕ್ಷಣ. ಚಿಕಿತ್ಸೆ ಮತ್ತೆ ಮುಂಜಾಗ್ರತಾ ಕ್ರಮಗಳ ಬಗ್ಗೆ ವ್ಯಾಪಕ ಆರೋಗ್ಯ ಶಿಕ್ಷಣ ನೀಡಲಾಗಿದೆ.
3. ದಿ: 26–3–06ರಂದು ಐ.ಎಂ.ಎ. ಬೀದರ್ ಬ್ರ್ಯಾಂಚ್‌ನಲ್ಲಿ ಎಲ್ಲಾ ಖಾಸಗಿ ವೈದ್ಯರಿಗೆ ಹಾಗೂ ಬೀದರಿನ ನಾಗರಿಕರಿಗೆ ಚಿಕುಂಗುನ್ಯ ರೋಗದ ಬಗ್ಗೆ ವಿಶೇಷ ಉಪನ್ಯಾಸ ನೀಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಬಂಡೆಪ್ಪ ಕಾಶೆಂಪೂರ್‌ರವರು ಸಹಾ ಭಾಗವಹಿಸಿದ್ದರು.
4. ದಿ: 16–2–06/ 17–3–06ರಂದು ಜಿಲ್ಲಾ ಸಮನ್ವಯ ಸಮಿತಿಯ ತುರ್ತು ಸಭೆ ನಡೆಸಲಾಯಿತು.
5. ದಿ: 22–2–06/ 24–2–06ರಂದು ಅನುಷ್ಠಾನಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ವೈದ್ಯಾಧಿಕಾರಿಗಳ ತುರ್ತು ಸಭೆ ನಡೆಸಲಾಯಿತು.

6. ದಿ: 13–3–06ರಂದು ಡಾ: ಯು.ವಿ.ಎಸ್. ರಾಣ, ಉಪನಿರ್ದೇಶಕರು, ಎನ್.ಐ.ಸಿ.ಡಿ. ದೆಹಲಿ ಇವರು ಬೀದರ್ ಜಿಲ್ಲೆಗೆ ಭೇಟಿ ನೀಡಿ ಮಾರ್ಗದರ್ಶನವನ್ನು ನೀಡಿರುತ್ತಾರೆ.

7. ದಿ: 21–9–05/ 30–3–06 ರಂದು ಬೀದರ್ ರಕ್ಷಾಳ (ಬಿ) ಡೋಣಗಾಂವ ಗ್ರಾಮಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಕೀಟಾಧ್ಯಯನ ನಡೆಸಲಾಗಿದೆ.

8. ಸಂಶಯಾಸ್ಪದ ಹಳ್ಳಿಗಳಿಗೆ ಭೇಟಿ ನೀಡಲು ವಿಶೇಷ ತಂಡಗಳನ್ನು ರಚಿಸಿ, ಮಾಹಿತಿ, ಶಿಕ್ಷಣ ಸಂಪರ್ಕ ಆಂಧೋಲನ ನಡೆಸಲಾಗಿದೆ ಹಾಗೂ ಬೀದರ್ ನಗರದಲ್ಲಿ ಸ್ವಯಂ ಸೇವಾ ಸಂಘಗಳ ಸಹಕಾರದಿಂದ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರತಿಯೊಂದು ಮನೆಗಳಿಗೆ ಚಿಕುಂಗುನ್ಯ ರೋಗದ ಬಗ್ಗೆ ಮಾಹಿತಿ ಒದಗಿಸಲಾಯಿತು.

9. ಎಲ್ಲಾ ಜಿಲ್ಲಾ ಮಟ್ಟದ ಆರೋಗ್ಯ ಅನುಷ್ಟಾನಾಧಿಕಾರಿಗಳ ವಿಶೇಷ ಸಂಚಾರಿ ತಂಡಗಳನ್ನು ರಚಿಸಿ, ಎಲ್ಲಾ ರೋಗಗ್ರಸ್ಥ ಹಳ್ಳಿಗಳಿಗೆ ಭೇಟಿ ನೀಡಿರುತ್ತಾರೆ.

10. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಸುಮಾರು 350 ಹಳ್ಳಿಗಳಿಗೆ ಭೇಟಿ ನೀಡಿ ಮುಂಜಾಗ್ರತಾ ಕ್ರಮ ತೆಗೆದುಕೊಂಡಿರುತ್ತಾರೆ.

11. ಈ ಎಲ್ಲಾ ಮೇಲ್ಕಂಡ ಕ್ರಮಗಳನ್ನು ಕೈಗೊಳ್ಳುವ ಮೂಲಕ ಜಿಲ್ಲಾ ಆಡಳಿತವು ರೋಗದ ಮೇಲೆ ತೀವ್ರ ನಿಗಾವಹಿಸುತ್ತಿದೆ.

556 (911) ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರು, ಶುಶ್ರೂಷಕರು ಹಾಗೂ ವೈದ್ಯಕೇತರ ಹುದ್ದೆಗಳ ಸಂಖ್ಯೆಗಳೆಷ್ಟು; (ಆಸ್ಪತ್ರೆವಾರು ಖಾಲಿ ಹುದ್ದೆವಾರು ವಿವರ ನೀಡುವುದು);

ಆ) ವೈದ್ಯರು ಹಾಗೂ ವೈದ್ಯಕೇತರ ಸಿಬ್ಬಂದಿಯ ಕೊರತೆಯಿಂದಾಗಿ ಸಾರ್ವಜನಿಕರಿಗೆ ಸರಿಯಾದ ವೈದ್ಯಕೀಯ ಸೌಲಭ್ಯ ಸಿಗದೆ ರೋಗಿಗಳು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು;

ಈ) ಸದರಿ ಹುದ್ದೆಗಳನ್ನು ಕೂಡಲೇ ತುಂಬಲಾಗುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿದೆ: